**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.</u>**

**ದಿನಾಂಕಃ 23 ನೇ ಮಾರ್ಚ್ ಮಾಹೆ 2017 ನೇ ಇಸವಿ.**

**<u>ಸಿ.ಸಿ.ನಂ ಃ 1703/2016</u>**

**ಸೀತಾರಾಮ ಗಾಣಿಗ, ಪ್ರಾಯ 49 ವರ್ಷಗಳು,**
**ತಂದೆಃ ಶೀನ ಗಾಣಿಗ,**
**ಮಾಲಕರುಃ ಮೆಸಸ್ಸ್ ಆಕೃತಿ ಅಪ್ಪಾರೆಲ್ಸ್,**
**ವಾಸಃ ಹೆರ್ಗಲ್ಲು ಹೌಸ್,**
**ಚಾರ ಗ್ರಾಮ ಮತ್ತು ಅಂಚೆ,**
**ಕಾರ್ಕಳ ತಾಲೂಕು. .... ಪಿರ್ಯಾದಿದಾರರು.**

**- ವಿರುದ್ಧ -**

**ಪ್ರವೀಣ್ ಜನಾರ್ಧನ ರಾವ್, 40 ವರ್ಷಗಳು,**
**ತಂದೆಃ ಜನಾರ್ಧನ ರಾವ್,**
**ವಾಸಃ ನಂಃ 1/9, …………**
**ಚರ್ಚ್ ಶಾಲೆಯ ಹತ್ತಿರ,**
**ಕುಕ್ಕುಂದೂರು ಗ್ರಾಮ,**
**ಕಾರ್ಕಳ ತಾಲೂಕು-574104. .... ಆರೋಪಿ**

**<u>ಆ ಪಾ ದ ನೆ</u>**

**ಆರೋಪಿಯಾದ ನೀವು ಪಿರ್ಯಾದಿದಾರರಿಂದ ಪಡೆದ ಸಾಲದ ಹಣದ ಮರುಪಾವತಿಯ ಸಲುವಾಗಿ ದಿಃ 19-12-2014 ರಂದು 1,35,000/- ರೂ. ಗಳಿಗೆ ಕುಕ್ಕುಂದೂರು ಶಾಖೆಯ ವಿಜಯಾ ಬ್ಯಾಂಕ್ ಚೆಕ್ ಸಂಖ್ಯೆಃ 698782 ನ್ನು ನೀಡಿದ್ದು, ಸದ್ರಿ ಚೆಕ್ಕನ್ನು ಫಿರ್ಯಾದಿದಾರರು ನಗದೀಕರಿಸಲು ಸಿಂಡಿಕೇಟ್ ಬ್ಯಾಂಕ್, ಕಾರ್ಕಳ**

ಶಾಖೆಗೆ ಹಾಜರುಪಡಿಸಿದ್ದು, ಆದರೆ 'ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ' ಎಂಬ ವಿಷಯವನ್ನು ಸದರಿ ಬ್ಯಾಂಕ್‌ನವರು ದಿಃ 06-01-2015 ರ ಹಿಂಬರಹದ ಮೂಲಕ ತಿಳಿಯಪಡಿಸಿರುತ್ತಾರೆ. ಅದರಂತೆ ಫಿರ್ಯಾದಿದಾರರು ದಿಃ 14-01-2015 ರಂದು ವಕೀಲರ ನೋಟೀಸ್ ಜಾರಿ ಮಾಡಿದ್ದು, ಸದ್ರಿ ನೋಟೀಸು ನಿಮಗೆ ದಿಃ 17-01-2015 ರಂದು ಜಾರಿಯಾಗಿದ್ದು, ಆದರೆ ಈವರೆಗೆ ಸದರಿ ಚೆಕ್ಕಿನ ಬಾಬ್ತು ಹಣವನ್ನು ಫಿರ್ಯಾದುದಾರರಿಗೆ ನೀಡಿರುವುದಿಲ್ಲ. ಆ ಮೂಲಕ ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ 138ರ ಕೆಳಗೆ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವಂತೆ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1ಃ ಮೇಲೆ ಓದಿ ಹೇಳಿದ ಆರೋಪವನ್ನು ಕೇಳಿರುವಿರಾ?

ಉತ್ತರ ಃ-

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಬಯಸುವಿರಾ?

ಉತ್ತರ ಃ-

(ಆರೋಪಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ಧೃಢೀಕರಿಸುತ್ತೇನೆ.)

ಪ್ರ.ವ್ಯ.ನ್ಯಾ.ಮತ್ತು ಪ್ರ.ದ.ನ್ಯಾ.ದಂ,
ಕಾರ್ಕಳ.